ಶ್ರೀ ಎಚ್. ಸಿದ್ದವೀರಪ್ಪನವರು.—ಇಂಡಿಯಾ ಸರ್ಕಾರದವರು ನಮಗೆ ಒದಗಿಸುವ ಮೈಲೋ, ಗೋಧಿ ಮುಂತಾದುವುಗಳನ್ನು ಅಮೇರಿಕಾ, ಕೆನಡಾ, ಅರ್ಜೆಂಟೈನಾ ಮುಂತಾದ ಕಡೆಗಳಿಂದ ತರಿಸಿಕೊಡುತ್ತಾರೆ.

ಶ್ರೀ ಟಿ. ನಾಗಪ್ಪನವರು.—ಹೊರಗಿನಿಂದ ಯಾವ ತರಹ ಆಹಾರ ಬರುತ್ತದೆ?

Mr. SPEAKER.—That is not a proper supplementary.

ಶ್ರೀ ಆರ್. ಅನಂತರಾಮ್ಮರವರು (ಚಾಮರಾಜಪೇಟೆ).—159 (*b*) ಪ್ರಶ್ನೆಯನ್ನು ನೋಡುವುದಾದರೆ ಆಹಾರ ಪದಾರ್ಥಗಳ ಬಳಸುವಿಕೆ ವರ್ಷ ವರ್ಷಕ್ಕೂ ಕಡಮೆಯಾಗುತ್ತಿದೆ. ಇದಕ್ಕೆ ಕಾರಣವೇನು? ಅಕ್ಕಿ, ಗೋಧಿ ಎಲ್ಲದರಲ್ಲೂ ಕಡಮೆಯಾಗುತ್ತಿದೆ!

Sri H. SIDDAVEERAPPA.—May I submit Sir, that only for the year 1952, up to this time, there is some reduction shown. Otherwise, it is more or less the same.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—195 (*a*) ಪ್ರಶ್ನೆಗೆ ಉತ್ತರ "ಹತೋಟಿ ರದ್ದುಗೊಳಿಸಬೇಕೆಂದು ಸಾರ್ವಜನಿಕರು ಕೇಳುತ್ತಿರುವುದು ನಿಜವೇ" ಎಂಬುದಕ್ಕೆ.....

Sri H. SIDDAVEERAPPA.—Sir, question No. 195 has not been put.

Mr. SPEAKER.—No, it is not put.

Sri B. HUTCHE GOWDA.—ಈಗ free trade ಗೆ ಅವಕಾಶವಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—Free movementಗೆ ಅವಕಾಶವಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಇದೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಯಾರು ಎಲ್ಲಿಗೆ ಬೇಕಾದರೂ ಎಷ್ಟು ಧಾನ್ಯವನ್ನಾದರೂ ತೆಗೆದುಕೊಂಡು ಹೋಗಬಹುದೇ?

Sri H. SIDDAVEERAPPA.—Those that are *bona fide* consumers, excluding the statutory rationing area, are permitted to take any reasonable quota that they want.

ಶ್ರೀ ಬಿ. ಹುಚ್ಚೇಗೌಡರು.—ವ್ಯಾಪಾರವೇ ಇಲ್ಲದಿದ್ದ ಮೇಲೆ ಹೇಗೆ ಆಹಾರ ಧಾನ್ಯಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯ?

Sri H. SIDDAVEERAPPA.—That is a matter of opinion. There are various methods of bringing it.

Sri B. HUTCHE GOWDA.—May I know one of those methods, Sir? If I am forbidden to purchase, how is it possible for me to take?

ಪದಾರ್ಥವೇ ಕೊಳ್ಳುವುದಕ್ಕೆ ಸಿಕ್ಕದಿರುವಾಗ ಕೊಳ್ಳುವುದಕ್ಕೆ ಸಾಧ್ಯವೇ?

(No answer)

ಶ್ರೀ ಬಿ. ಹುಚ್ಚೇಗೌಡರು.—160 (*c*) ಪ್ರಶ್ನೆಗೆ ಉತ್ತರದಲ್ಲಿ 'ಇಲ್ಲ' ಎಂದು ಹೇಳಿದ್ದೀರಿ. ಆಹಾರದ ಹತೋಟಿಯ ಸಂಬಂಧವಾಗಿ ಇಂಡಿಯಾ ಸರ್ಕಾರದವರು ಒಂದು ಹುಕ್ಕುಂವಾಡಿದಾಗ, ಸಬ್ಸಿಡಿ ಕೊಡುವ ವಿಷಯವನ್ನು ಒಪ್ಪಿಕೊಂಡು ತಾನೆ ಇಂಡಿಯಾ ಸರ್ಕಾರದವರೊಡನೆ ಒಪ್ಪಂದಕ್ಕೆ ಬಂದುದು?

Sri H. SIDDAVEERAPPA.—Please repeat the question.

ಶ್ರೀ ಬಿ. ಹುಚ್ಚೇಗೌಡರು.—ಭಾರತ ಸರ್ಕಾರದವರು ಫುಡ್ ಕಂಟ್ರೋಲ್ ಜಾರಿಗೆ ತಂದಾಗ ಸಬ್ಸಿಡಿಯನ್ನು ಕೊಡತಕ್ಕ ಷರತ್ತಿನ ಮೇಲೆ ತಾನೆ ಅದನ್ನು ಜಾರಿ ಮಾಡಿದ್ದು?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ; ಹಾಗೇನೂ ಇಲ್ಲ.

ಶ್ರೀ ಎಸ್. ಎಂ. ಮರಿಯಪ್ಪನವರು (ಹೆರಿಯಾಪಟ್ಣ).—486ನೆಯ ಪ್ರಶ್ನೆಗೆ ಉತ್ತರದಲ್ಲಿ ಪಡಿತರ ಪದ್ಧತಿ 4 ನಗರಗಳಿಲ್ಲವೆಂದು ಮಾತ್ರ ಹೇಳಿದೆ. ಈ ನಗರಗಳಿಗೆ ಎಷ್ಟು ಸೇರು ಧಾನ್ಯ ಸಾಗಿಸಲು ಅವಕಾಶಕೊಟ್ಟಿದೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಪಡಿತರ ಪದ್ಧತಿ ಜಾರಿಯಲ್ಲಿರುವ ಊರುಗಳಲ್ಲಿ ಎರಡು ಸೇರು ಮಾತ್ರ ತರಬಹುದು.

ಶ್ರೀ ಎಸ್. ಎಂ. ಮರಿಯಪ್ಪನವರು.—ಹೀಗೆ ಎರಡು ಸೇರಿಗೆ ಅವಕಾಶಕೊಟ್ಟಿರುವುದರಿಂದ ಯಾವ ಉಪಯೋಗವೂ ಇಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಎರಡು ಸೇರು ಬಹಳ ಕಡಮೆ, ಅದನ್ನು ಹೆಚ್ಚುಮಾಡಬೇಕೆಂದು ವನವಿಗಳು ಬಂದಿವೆ. ಎರಡು ಸೇರಿನಿಂದ ಪ್ರಯೋಜನವಿದೆಯೆಂತಲೇ ಸರ್ಕಾರದವರ ಗಮನಕ್ಕೆ ಬಂದಿದೆ.

ಶ್ರೀ ಎಸ್. ಎಂ. ಮರಿಯಪ್ಪನವರು.—ಹತ್ತು ಸೇರು ದವಸವನ್ನು ಸಾಗಿಸುವುದಕ್ಕೆ ಅವಕಾಶಕೊಟ್ಟರೆ ಅದರಿಂದ ಸರ್ಕಾರಕ್ಕೆ ತೊಂದರೆಯೇನು?

ಶ್ರೀ ಎಚ್. ಸಿದ್ದವೀರಪ್ಪನವರು.—ಹೀಗೆ ಮಾಡಿದರೆ ಕಾನೂನುಬದ್ಧ ಪಡಿತರವಿಲ್ಲದಿರುವ ಪ್ರದೇಶಗಳಿಂದ ಕಾನೂನುಬದ್ಧ ಪಡಿತರವಿರುವ ಪ್ರದೇಶಗಳಿಗೆ ಹೆಚ್ಚು ದವಸ ಹೋಗಿ ಕಾನೂನುಬದ್ಧ ಪಡಿತರ ಜಾರಿಯಲ್ಲಿಲ್ಲದ ಪ್ರದೇಶಗಳಿಗೆ ತೊಂದರೆಯಾಗಬಹುದೆಂದು ಸರ್ಕಾರದ ಭಾವನೆ.

Shifting the Agricultural College from Hebbal.

Q.—176. **Sri K. V. BYRE GOWDA** (Bangalore North).—

Will the Government be pleased to state :—

(*a*) whether they are shifting the Agricultural College from Hebbal, Bangalore North Taluk;

(*b*) whether the school also will be shifted;

(*c*) the expenditure incurred on the Agricultural College from the date of its starting till now (yearwar information may kindly be furnished);

(SRI K. V. BYRE GOWDA).

(*d*) total number of students who are educated during these years;

(*e*) whether they are utilising the services of such trained graduates?

A.—**Sri H. SIDDAVEERAPPA** (Minister for Home Affairs and Agriculture).—

(*a*) The subject is under the active consideration of Government.

(*b*) No decision is yet taken.

		Rs.	a.	p.
(*c*) 1946-47	...	1,64,775	11	0
1947-48	...	2,26,279	8	0
1948-49	...	1,50,018	10	0
1949-50	...	1,05,758	4	0
1950-51	...	1,58,817	9	4
1951-52	...	1,67,674	11	5
Total	...	9,73,324	5	9

(*d*) The College was started in July 1946. The first batch of Agricultural Graduates passed out of the College in 1949. Total number of graduates so far is 116—

1949	...	29	graduates
1950	...	36	,,
1951	...	29	,,
1952	...	22	,,

(*e*) Yes.

ಶ್ರೀ ಕೆ. ವಿ. ಬೈರೇಗೌಡರು.—ಬೇರೆ ಸ್ಥಳಕ್ಕೆ ವರ್ಗಾಯಿಸುವ ವಿಷಯ ಸರ್ಕಾರದ ತೀವ್ರಾಲೋಚನೆಯಲ್ಲದೆ ಎಂದು ತಿಳಿಸಿದೆ. ಇದರಿಂದ ಸರ್ಕಾರಕ್ಕೆ ನಷ್ಟವಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪನವರು.—ನಷ್ಟವಿಲ್ಲ.

ಶ್ರೀ ಕೆ. ವಿ. ಬೈರೇಗೌಡರು.—ಈಗ ಈ ಕಟ್ಟಡಗಳಿಗೆ 9,73,324 ರೂಪಾಯಿ ಖರ್ಚಾಗಿದ್ದು ಪುನಃ ಬೇರೆ ಕಡೆಗೆ ವರ್ಗಾಯಿಸುವುದಾದರೆ ಅಲ್ಲಿ ಕಟ್ಟಡಗಳಿಗೆ ಖರ್ಚಾಗುವುದಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಸರ್ಕಾರದ ಅಭಿಪ್ರಾಯದಲ್ಲಿ ಕಟ್ಟಡಗಳಿಗೆ ಹೆಚ್ಚು ಹಣ ಹಾಕಬೇಕೆಂದು ಇಷ್ಟವಿಲ್ಲ.

ಶ್ರೀ ಕೆ. ವಿ. ಬೈರೇಗೌಡರು.—ಈಗ ಈ ಕಾಲೇಜು ಹೆದ್ದಾಳಿನಲ್ಲಿರುವುದರಿಂದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಸೆಂಟ್ರಲ್ ಕಾಲೇಜು ಮುಂತಾದ ಕಡೆಗಳಲ್ಲಿರುವಂತೆ ಲ್ಯಾಬೊರೇಟರಿ ಉಪಕರಣಗಳು ಸಿದ್ಧವಾಗಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಸಿದ್ಧವಾಗಿವೆ. ಆದರೆ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯಾರ್ಥಿಗಳಿಗೆ ಹೆಚ್ಚು ಅಭಿಮಾನ ಮತ್ತು ಆಸಕ್ತಿ ಬೆಳೆಯಲೆಂಬ ಉದ್ದೇಶದಿಂದ ಅಂತಹ ಪ್ರದೇಶಕ್ಕೆ ಹಾಕಬೇಕೆಂಬ ಯೋಚನೆ.

ಶ್ರೀ ಕೆ. ವಿ. ಬೈರೇಗೌಡರು.—ಹೆದ್ದಾಳು ಗ್ರಾಮಾಂತರ ಪ್ರದೇಶವಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಅಲ್ಲ.

ಶ್ರೀ ಕೆ. ವಿ. ಬೈರೇಗೌಡರು.—ಹಿಂದೆ ಇದನ್ನು ಬೇರೆ ಕಡೆ ವರ್ಗಾಯಿಸುವ ವಿಚಾರದಲ್ಲಿ ಒಂದು ಸಮಿತಿಯನ್ನು ಮಾಡಿದ್ದರು, ಅವರು ಇದನ್ನು ವರ್ಗಮಾಡಬೇಕೆಂದು ಹೇಳಿದರೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಅವರು ಏಕಾಭಿಪ್ರಾಯ ಕೊಟ್ಟಿಲ್ಲ. ಆದುದರಿಂದ ಸದ್ಯಕ್ಕೆ ಅಲ್ಲೇ ಇಡೋಣವೆಂದು ತೀರ್ಮಾನಿಸಿದರು.

ಶ್ರೀ ಕೆ. ವಿ. ಬೈರೇಗೌಡರು.—ಹಾಗಾದರೆ ವ್ಯವಸಾಯದ ಸ್ಕೂಲನ್ನು ವಜಾ ಮಾಡುವ ಯೋಚನೆಯಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಅದೂ ಯೋಚನೆಯಲ್ಲಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡರು (ಅರಕಲಗೂಡು).—ಹಾಗೆ ವರ್ಗಮಾಡಬೇಕಾದರೆ ಸರ್ಕಾರಕ್ಕೆ ತಗಲುವ ಖರ್ಚೆಷ್ಟು?

ಶ್ರೀ ಎಚ್. ಸಿದ್ದವೀರಪ್ಪನವರು.—ಅದನ್ನೆಲ್ಲಾ ಯೋಚನೆಮಾಡುತ್ತಿದ್ದೇವೆ. ಅಲ್ಲದೆ ಫೋರ್ಡ್ ಫೌಂಡೇಷನ್ ಯೋಜನೆಯೂ ಈಗಲೇ ಬರಲಿರುವುದರಿಂದ ಅದರ ಸಹಾಯವನ್ನೂ ತೆಗೆದುಕೊಳ್ಳಬೇಕೆಂಬ ಉದ್ದೇಶವಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡರು.—ಸ್ಕೂಲು ಯಾವ ಕಾಲದಲ್ಲಿ, ಕಾಲೇಜು ಯಾವ ಕಾಲದಲ್ಲಿ ಕೆಲಸಮಾಡಬೇಕೆಂದು ಗೊತ್ತುಮಾಡಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪನವರು.—ಇನ್ನೂ ನಿರ್ಧಾರಮಾಡಿಲ್ಲ. ಯಾವ ರೀತಿ ಮಾಡಬೇಕೆಂಬುದು ಆಲೋಚನೆಯಲ್ಲದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡರು.—ಹೆದ್ದಾಳಿನಲ್ಲಿ ಈಗಾಗಲೇ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಕಟ್ಟಡಗಳನ್ನು ಕಟ್ಟಿಸಿದ್ದೀರಿ. ಮುಂದೆ ಇವನ್ನು ಏನುಮಾಡುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪನವರು.—ಈ ಕಟ್ಟಡಗಳನ್ನು ಇತರ ಸರ್ಕಾರಿ ಕಾರ್ಯಗಳಿಗೆ, ಪ್ರಯೋಜನಕರವಾದ ಕೆಲಸಗಳಿಗೆ ಉಪಯೋಗಿಸಿಕೊಳ್ಳುತ್ತೇವೆ.

Sri H. S. RUDRAPPA (Honnali).—May I know whether all the graduates that the Agricultural College has produced have been absorbed in the Government service?

Sri H. SIDDAVEERAPPA.—Yes, to some extent wherever possible.

Sri H. S. RUDRAPPA.—May I know how many graduates have been absorbed till now?

Sri H. SIDDAVEERAPPA.—Notice

Sri H. S. RUDRAPPA.—May I know whether it has been brought to the notice of the Government that a number of students who have passed out of this college have no employment and are wandering without employment?

Sri H. SIDDAVEERAPPA.—Sir, I am not aware of that. It is not the policy of the College to produce only

graduates who seek employment in Government service.

Sri H. S. RUDRAPPA.—Are the Government aware that none of these graduates have settled down on lands?

Sri H. SIDDAVEERAPPA.—Sir, if they have not done so, it is rather unfortunate. But Government are prepared to make them settle on lands if they are forthcoming.

Sri H. S. RUDRAPPA.—May I know Sir, what is the usefulness of such a college otherwise?

Sri H. SIDDAVEERAPPA.—Government have thought that it is absolutely necessary in the interest of the agricultural industry in the State.

Sri H. S. RUDRAPPA.—Will it not result in waste unless these students who go out of this college employ themselves on land?

Sri H. SIDDAVEERAPPA.—If they want to usefully settle on lands, Government will be only too glad to help them.

Police help to Landlords at Kagodu.

Q.—202. **Sri S. GOPALA GOWDA** (Sagar-Hosanagar).—Will the Government be pleased to state:—

(*a*) the amount spent towards police help to the landlords at Kagodu in connection with the Satyagraha there?

(*b*) whether any portion of that expenditure was met by the concerned landlords;

(*c*) the period during which the police help was given to the landlords?

A.—**Sri H. SIDDAVEERAPPA** (Minister for Home Affairs and Agriculture).—

(*a*) No police help was given to the landlords and hence no amount was spent in this behalf.

(*b*) Does not arise in view of the answer to (*a*).

(*c*) Do do

ಶ್ರೀ ಎಸ್. ಗೋಪಾಲಗೌಡರು.—ಜಮೀನ್ದಾರರಿಗೆ ಪೋಲೀಸಿನವರ ಸಹಾಯವನ್ನು ಒದಗಿಸಲಿಲ್ಲವೆಂದು ಉತ್ತರ ಕೊಟ್ಟಿದೆ. ಪೋಲೀಸಿನವರ ಸಹಾಯವೆಂದರೆ ಏನು ಅರ್ಥಮಾಡಿಕೊಂಡಿದ್ದಾರೆ ಸರ್ಕಾರದವರು?

Mr. SPEAKER.—That question need not be answered.

ಶ್ರೀ ಎಸ್. ಗೋಪಾಲಗೌಡರು.—ಪೋಲೀಸ್ ಸಹಾಯವೆಂದರೇನು?

Mr. SPEAKER.—It is the Hon'ble Member's question and he must know what it is.

ಶ್ರೀ ಎಸ್. ಗೋಪಾಲಗೌಡರು.—ಕಾಗೋಡಿನಲ್ಲಿ ಪೋಲೀಸ್ ಸ್ಪೇಷ್ ಇದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ.

ಶ್ರೀ ಎಸ್. ಗೋಪಾಲಗೌಡರು.—ಆದರೆ ಅಲ್ಲಿ ಪೋಲೀಸಿನವರಿದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಬಂದಿದೆ.

ಶ್ರೀ ಎಸ್. ಗೋಪಾಲಗೌಡರು.—ಏಕೆ ಇದ್ದರು?

ಶ್ರೀ ಎಚ್. ಸಿದ್ದವೀರಪ್ಪನವರು.—Law and Order maintain ಮಾಡುವುದಕ್ಕೆ.

ಶ್ರೀ ಎಸ್. ಗೋಪಾಲಗೌಡರು.—ಯಾರ ಶಾಂತಿಯನ್ನು ರಕ್ಷಿಸುವುದಕ್ಕೆ?

ಶ್ರೀ ಎಚ್. ಸಿದ್ದವೀರಪ್ಪನವರು.—ನ ಕಾ ರ ಮತ್ತು ಪ್ರಜೆಗಳಿಗಾಗಿ.

ಶ್ರೀ ಎಸ್. ಗೋಪಾಲಗೌಡರು.—ಯಾವ ಪ್ರಜೆಗಳಿಗಾಗಿ?

ಶ್ರೀ ಎಚ್. ಸಿದ್ದವೀರಪ್ಪನವರು.—ಆ ಗ್ರಾಮಗಳ ಪ್ರಜೆಗಳಿಗಾಗಿ.

ಶ್ರೀ ಎಸ್. ಗೋಪಾಲಗೌಡರು.—ಅಲ್ಲಿನ ಎಲ್ಲ ಪ್ರಜೆಗೂ ಸಹಾಯಮಾಡುವುದಕ್ಕೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಅಲ್ಲಿನ ಎಲ್ಲ ನಾಗರಿಕ ಪ್ರಜೆಗಳ ಸಹಾಯಕ್ಕಾಗಿ.

ಶ್ರೀ ಎಸ್. ಗೋಪಾಲಗೌಡರು.—ಏಕೆ ಸಹಾಯ?

Sri H. SIDDAVEERAPPA.—Because there was imminent threat to peace and therefore in the interest of maintaining Law and Order the Government were obliged to maintain some police in that place for some time.

ಶ್ರೀ ಎಸ್. ಗೋಪಾಲಗೌಡರು.—ಯಾರು ಅಲ್ಲಿ ಶಾಂತಿಯನ್ನು ಕಲಕಿದವರು?

ಶ್ರೀ ಎಚ್. ಸಿದ್ದವೀರಪ್ಪನವರು.—ಯಾರು ಶಾಂತಿಯನ್ನು ಕಲಕುವುದಕ್ಕೆ ಪ್ರಯತ್ನಮಾಡಿದರೋ ಅದನ್ನು ತಡೆಗಟ್ಟುವುದಕ್ಕೆ.

ಶ್ರೀ ಎಸ್. ಗೋಪಾಲಗೌಡರು.—ಸರ್ಕಾರಕ್ಕೆ ಯಾರಿಂದ ದೂರು ಬಂದಿತು?

ಶ್ರೀ ಎಚ್. ಸಿದ್ದವೀರಪ್ಪನವರು.—ಯಾರಿಗೆ ಶಾಂತಿ ಭಂಗವಾಗಿತ್ತೋ ಅವರಿಂದ.

ಶ್ರೀ ಎಸ್. ಗೋಪಾಲಗೌಡರು.—ಅವರ ಹೆಸರೇನು?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

ಶ್ರೀ ಎಸ್. ಗೋಪಾಲಗೌಡರು.—ಜಮೀರ್ದಾರರಿಗೆ ಪೋಲೀಸಿನವರ ಸಹಾಯ ಕೊಟ್ಟಿಲ್ಲವೆಂಬ ಉತ್ತರಕ್ಕೆ ಆಧಾರವಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಇದೆ.

ಶ್ರೀ ಎಸ್. ಗೋಪಾಲಗೌಡರು.—ಯಾವ ಜಮೀರ್ದಾರರಿಗೂ ಪೋಲೀಸರ ಸಹಾಯ ಕೊಟ್ಟಿಲ್ಲವೆಂಬುದಕ್ಕೆ ಆಧಾರವಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಇದೆ

ಶ್ರೀ ಬಿ. ನಾರಾಯಣಸ್ವಾಮಿಯವರು (ಮೈಸೂರು ಸಿಟಿ ದಕ್ಷಿಣ).—ಇಲ್ಲಿ ಯಾರಿಂದ ಶಾಂತಿಭಂಗವಾಗುತ್ತಿತ್ತು?

ಶ್ರೀ ಎಚ್. ಸಿದ್ದವೀರಪ್ಪನವರು.—ಯಾರು ಇನ್ನೊಬ್ಬರ ಜಮೀನಿನ ಮೇರೆ ಪ್ರವೇಶಮಾಡುವುದಕ್ಕೆ ಪ್ರಯತ್ನಮಾಡಿದರೋ ಅವರಿಂದ.